

ಫೋ ಹುಟ್ಟಿದ ಸ್ಯಾನ್ ಜಿಯಾನೋ ರೈಲ್ವೆ ನಿಲ್ದಾಣದ ಸಮೀಪದ ಮ್ಯಾಜ್ಜೋರೆ ಸರೋವರ

ಮೇಲೆ ನಿಂತು ಕೆಲಸ ಮಾಡತೊಡಗಿದ್ದರು. ಹಾಗಿರುವಾಗ ಒಂದು ದಿನ ಅವರು ನಿಂತಿದ್ದ ಸಾರುವೆ ಇದ್ದಕ್ಕಿದ್ದಂತೆ ಕುಸಿದು ಬಿದ್ದಿತ್ತು. ಅಪ್ಪನೂ ಸೇರಿದಂತೆ ಹದಿನೈದು ಜನ ಕೆಲಸಗಾರರರು ಸಾರುವೆ ಸಮೇತ ಏಕ್ದಂ ಕೆಳಕ್ಕೆ ಬಿದ್ದಿದ್ದರು. ಬದುಕುಳಿದ ಹತ್ತು ಜನರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿತ್ತು. ಅವರನ್ನೆಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅವರಲ್ಲಿ ನನ್ನ ಅಪ್ಪನೇ ಹೆಚ್ಚು ಅದೃಷ್ಟವಂತನಾಗಿದ್ದ. ಆದರೂ ಅವನ ಕಾಲು ಕೆಲವು ಕಡೆ ಮುರಿತಕ್ಕೊಳಗಾಗಿತ್ತು. ಹಿಂಭಾಗಕ್ಕೆ ಬಿದ್ದಿದ್ದ ಪೆಟ್ಟಿನಿಂದಾಗಿ ಅಪ್ಪ ಅರೆ ಪಾರ್ಶ್ವವಾಯುವಿಗೆ ತುತ್ತಾಗಿದ್ದ.

ಆಸ್ಪತ್ರೆಯಿಂದ ಬಿಡುಗಡೆಯಾಗುತ್ತಲೇ ಆಂಡ್ರೇಸ್ ಅಪ್ಪನನ್ನು ತನ್ನ ಮನೆಗೆ ಕರೆದೊಯ್ದಿದ್ದ. ಅವನ ತಾಯಿ ಅಪ್ಪನನ್ನು ಸ್ವಂತ ಮಗನಂತೆಯೇ ನೋಡಿಕೊಂಡಿದ್ದಳು. ಹಾಗಾಗಿ, ಅಪ್ಪನಿಗೆ ಆಂಡ್ರೇಸ್‌ನ ತಾಯಿಯ ಬಗ್ಗೆ ಅಪಾರ ಗೌರವವಿತ್ತು. ಸ್ವಲ್ಪ ಚೇತರಿಸಿಕೊಂಡ ಮೇಲೆ ಅಪ್ಪ ಆಂಡ್ರೇಸ್‌ನೊಂದಿಗೆ ಜರ್ಮನಿಗೆ ಹೋಗಿದ್ದ. ಅಲ್ಲಿ ಹ್ಯಾನೋವರ್‌ನಲ್ಲಿದ್ದ ಸೈಟೊಂದರಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದರು. ಅದೇತಾನೆ ಮೊದಲ ಮಹಾಯುದ್ಧ ಶುರುವಾಗಿತ್ತು. ಒಂದಷ್ಟು ದಿನ ಕಳೆದ ಮೇಲೆ ಆಂಡ್ರೇಸ್ ತಿರುಗಿ ಫ್ರಾನ್ಸಿಗೆ ಹೋಗಿದ್ದ. ಅಪ್ಪ ಇಟಲಿಯ ಲ್ಯಾಂಬೋರ್ಡಿಗೆ ವಾಪಸ್ಸಾಗಿದ್ದ. ಎರಡು ವರ್ಷಗಳ ಅನಂತರ ಆ ಸಂಘರ್ಷ ಇಟಲಿಯಲ್ಲಿ ಕಾಣಿಸಿಕೊಂಡಿತ್ತು. ಆಗ ಅಪ್ಪನಿಗೆ ಹತ್ತೊಂಬತ್ತು ವರ್ಷವೂ ತುಂಬಿರಲಿಲ್ಲ. ಆದರೂ ಅವನು ಕಾರ್ಸೋದ ಹೋರಾಟದ ಮಂಚೂಣಿಯಲ್ಲಿ ಗುರುತಿಸಿಕೊಂಡಿದ್ದ.

ಅನಂತರದ ದಿನಗಳಲ್ಲಿ ನನಗೆ ಗೊತ್ತಾಗಿದ್ದೇನೆಂದರೆ, ನಾನವತ್ತು ನನ್ನ ಮೇಲಂಗಿಗೆ ಹೊಲಿದಿದ್ದ, ಅರಾಜಕತಾವಾದಿಯೊಬ್ಬನಿಗೆ ತಲುಪಿಸಿದ್ದ ಪತ್ರ ತಲುಪಬೇಕಾಗಿದ್ದದ್ದು ಫ್ರಾನ್ಸಿನಲ್ಲಿದ್ದ ಇದೇ ಆಂಡ್ರೇಸ್‌ಗೆ ಅಂತ. ಆಗ ಅಲ್ಲಿ ಆಂಡ್ರೇಸ್ 'ಫ್ರಾನ್ಸ್ ಸ್ವಾಗತಿಸಿ' ಆಶ್ರಯ ನೀಡಿದ್ದ ರಾಜಕೀಯ ನಿರಾಶ್ರಿತರ ನೆರವಿನ ಸಂಘದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಈ ಕಾರಣಕ್ಕೇ ಅಪ್ಪ ಇಟಲಿಯಿಂದ ಪರಾರಿಯಾಗಿದ್ದ ನಿರಾಶ್ರಿತರಿಗೆ ಆಶ್ರಯ ಒದಗಿಸುವಂತೆ, ಅವರಿಗೆ ಕೆಲಸ ಹಾಗೂ ವಸತಿ ಸೌಕರ್ಯದ ವ್ಯವಸ್ಥೆ ಮಾಡುವಂತೆ ಆ ಪತ್ರದಲ್ಲಿ ಆಂಡ್ರೋಸ್‌ನನ್ನು ವಿನಂತಿಸಿಕೊಂಡಿದ್ದ. ಅಪ್ಪ ಮತ್ತು ಆಂಡ್ರೋಸ್ ಯುದ್ಧ ಪೂರ್ವ ಹಾಗೂ ಯುದ್ಧಾ ನಂತರ ತಂತಮ್ಮ ದೇಶಗಳಲ್ಲಿ ಸಮಾಜವಾದಿ ಪಕ್ಷದಲ್ಲಿ ಸಕ್ರಿಯವಾಗಿದ್ದರು.